ಓ ಎಸ್ ನಂಬರಃ 31-2015

ಡಿ ಡಬ್ಲ್ಯೂಃ 1

( ಸಾಕ್ಷಿಯನ್ನು ಪುನಃ ಕರೆಯಿಸಿ ದಿನಾಂಕಃ 17-09-2018 ರಂದು ಪ್ರಮಾಣ ವಚನ ಭೋಧಿಸಲಾಯಿತು .)

**<u>ಪಾಟೀ ಸವಾಲುಃ ಶ್ರೀ ಎಂ ಪಿ ಬಿ ವಕೀಲರಿಂದಃ</u>** ನಾನು ನ್ಯಾಯಾಲಯಕ್ಕೆ ನಾನೊಬ್ಬನೇ ಆರೋಪಿಯಾಗಿ ಈ ಹಿಂದೆ ಹಾಜರಾಗಿರುತ್ತೇನೆ.. ಪೊಲೀಸರಿಗೆ ಹೊಡೆದಿದ್ದೇನೆ ಎಂದು ಪ್ರಕರಣ ಆಗಿತ್ತು ಎಂದರೆ ನಿಜ. ಸಾಕ್ಷಿ ಸ್ವತಃ ಹೇಳುತ್ತಾರೆ ನಾನು ಹೊಡೆದಿರುವುದಿಲ್ಲ.

(2) ನನ್ನ ತಂದೆ ಸುಬ್ರಾಯ ಮೂಲತಃ ಬಾವಿಕೇರಿ ಗ್ರಾಮದವರು ಇರುತ್ತಾರೆ . ನನ್ನ ತಾಯಿಯೊಂದಿಗೆ ನನ್ನ ತಂದೆಯ ಮದುವೆಯಾದ ನಂತರ ಬೆಲೆಕೇರಿಯಲ್ಲಿ ವಾಸವಾಗಿದ್ದರು ಎಂದರೆ ಸಾಕ್ಷಿ ಸ್ವತಃ ಹೇಳುತ್ತಾರೆ ನನ್ನ ಅಜ್ಜಿಗೆ ನನ್ನ ತಾಯಿ ಒಬ್ಬಳೇ ಮಗಳಾಗಿದ್ದರಿಂದ ನನ್ನ ತಂದೆ ಅಳಿಯತನಕ್ಕೆ ಹೋಗಿರುತ್ತಾರೆ. ನನ್ನ ತಾಯಿಯ ಹೆಸರು ಮಾಣು ಗೋವಿಂದ ನಾಯ್ಕ ಇರುತ್ತದೆ . ಗೋವಿಂದ ನಾಯ್ಕ ಇವರು ಬೆಲೆಕೇರಿಯವರು ಇರುತ್ತಾರೆ . ಗೋವಿಂದ ನಾಯ್ಕನ ತಂದೆಯ ಹೆಸರು ಅನಂತ ನಾಯ್ಕ ಎಂದರೆ ನಿಜ. ಗೋವಿಂದ ಅನಂತ ನಾಯ್ಕ, ಕಲ್ಲು ಅನಂತ ನಾಯ್ಕ, ವೆಂಕಣ್ಣ ಅನಂತ ನಾಯ್ಕ ಅಣ್ಣ ತಮ್ಮಂದಿರು ಎಂದರೆ ನನಗೆ ಗೊತ್ತಿಲ್ಲ. ನನ್ನ ತಾಯಿ ಮೊದಲು ಮತ್ತು ಮದುವೆಯಾದ ನಂತರ ಬೆಲೆಕೇರಿಯಲ್ಲಿ ವಾಸವಾಗಿರುತ್ತಾಳೆ. ಗೋವಿಂದ ಅನಂತ ನಾಯ್ಕ , ಕಲ್ಲು ಅನಂತ ನಾಯ್ಕ ಮತ್ತು ವೆಂಕಣ್ಣ ಅನಂತ ನಾಯ್ಕ ದಾಯಾದಿಗಳು ಎಂದರೆ ನನಗೆ ಗೊತ್ತಿಲ್ಲ.

(3) ಬೆಲೆಕೇರಿ ಗ್ರಾಮದ ಸರ್ವೆ ನಂಬರ 89/6 ನೇದರಲ್ಲಿ ಬಾವಿಯು 1985 ರಿಂದ ಇರುತ್ತದೆ. 1985 ನೇ ಇಸ್ವಿಯಲ್ಲಿ ಬಾವಿ ತೆಗೆದಿಸಿದ್ದಾರೆ ಎಂದು ತೋರಿಸಲು ನನ್ನ ಹತ್ತಿರ ದಾಖಲೆ ಇರುವುದಿಲ್ಲ. 1985 ನೇ ಇಸ್ವಿಯ ಪೂರ್ವದಲ್ಲಿ ನಮ್ಮ ಮನೆ ಇದೆ ಎಂದರೆ ನಿಜ. ಬಾವಿ ತೆಗೆಯುವ ಪೂರ್ವದಲ್ಲಿ ದೊಡ್ಡ ಬಾವಿಯಿಂದ ನೀರನ್ನು ತರುತ್ತಿದ್ದರು. ದೊಡ್ಡ ಬಾವಿ ಯಾವ ಸರ್ವೆ ನಂಬರನಲ್ಲಿ

ಇತ್ತು ಎಂದು ನನಗೆ ಗೊತ್ತಿರುವುದಿಲ್ಲ. ಸದರಿ ದೊಡ್ಡ ಬಾವಿ ಈಗಲೂ ಇರುತ್ತದೆ. ಸದರ ದೊಡ್ಡ ಬಾವಿ ನಮ್ಮ ಮನೆಯಿಂದ 10 ಮಾರು ದೂರ ಇರುತ್ತದೆ. ನನ್ನ ತಂದೆ ತೆಗೆದಿಸಿರುವ ಬಾವಿ ಸರ್ವೆ ನಂಬರ 89/6 ರಲ್ಲಿ ಬರುತ್ತದೆ. ಸದರ ಬಾವಿ ನಮ್ಮ ಮನೆಯ ಮುಂದುಗಡೆ ಇರುತ್ತದೆ. ನಮ್ಮ ಮನೆಯ ಯಾವ ಕಡೆ ಮುಖ ಮಾಡಿ ಇರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಮ್ಮ ಮನೆ ಕಾರವಾರ ಸೈಡಿಗೆ ಮುಖ ಮಾಡಿ ಇರುತ್ತದೆ. ಬಾವಿ ನಮ್ಮ ಮನೆಯಿಂದ ಐದಾರು ಪುಟು ಅಂತರದಲ್ಲಿ ಇರುತ್ತದೆ. ನಮ್ಮ ಮನೆಗೆ ಕರೆಂಟ ಇರುತ್ತದೆ. ನಮ್ಮ ಮನೆಗೆ ಕರೆಂಟ 1964 ರಿಂದ ಇರುತ್ತದೆ. ಸದರಿ ಕರೆಂಟನ್ನು ವಾದಿಯ ಜಮೀನಿನ ಮುಖಾಂತರ ನಾನು ಪಡೆದುಕೊಂಡಿರುತ್ತೇನೆ. ತಕರಾರಿ ಬಾವಿಗೆ ಒಂದೇ ಪಂಪ್ ಸೆಟ್ ಇರುತ್ತದೆ. ಇವತ್ತಿಗೂ ಕೂಡಾ ಒಂದೇ ಪಂಪ್ ಸೆಟ್ ಇರುತ್ತದೆ. ನನ್ನ ಮತ್ತು ನನ್ನ ತಮ್ಮನ ಎರಡು ಗಡಗಡೆ ಇರುತ್ತದೆ. ದಾವಾ ಬಾವಿಯನ್ನು ಪೋಟೋದಲ್ಲಿ ನೋಡಿದರೆ ಗುರುತಿಸುತ್ತೇನೆ.

(4) ನನ್ನ ಪ್ರಕಾರ ದಾವಾ ಬಾವಿಯು ಆಯತಾಕಾರದಲ್ಲಿ ಇರುತ್ತದೆ . ಈಗ ನನಗೆ ತೋರಿಸುತ್ತಿರುವ ನಿಪಿ–10 ರಲ್ಲಿ ತೋರಿಸುತ್ತಿರುವ ಪೋಟೋ ದಲ್ಲಿರುವ ಬಾವಿ ನನಗೆ ಗೊತ್ತಾಗುವುದಿಲ್ಲ. ದಾವಾ ಬಾವಿಗೆ ವಾದಿಯರು ಪಂಪ ನ್ನು ಹಾಕಿರುವುದಿಲ್ಲ . ಒಂದೇ ಮನೆಯಲ್ಲಿ ನಾವು ಐದು ಕುಟುಂಬ ಇರುತ್ತೇವೆ. ತಕರಾರಿ ಬಾವಿಯಿಂದ ವಾದಿಯ ಮನೆ ಕಾರವಾರ ಸೈಡಿಗೆ ಬರುತ್ತದೆ. ಸದರಿ ಬಾವಿ 30 ರಿಂದ 35 ಪುಟು ವಾದಿಯರ ಮನೆಯಿಂದ ಅಂತರದಲ್ಲಿ ಇರುತ್ತದೆ. ತಕರಾರಿ ಬಾವಿಯಿಂದ ನಾಗರಕಟ್ಟೆ ತಾಗಿಯೇ ಇರುತ್ತದೆ . ನಾಗರಕಟ್ಟೆಯನ್ನು ಪೋಟೋದಲ್ಲಿ ನೋಡಿದರೆ ಗುರುತಿಸುತ್ತೇನೆ.. ಈಗ ನನಗೆ ತೋರಿಸುತ್ತಿರುವ ನಿಪಿ–16 ಮತ್ತು ನಿಪಿ–20 ರಲ್ಲಿ ಕಾಣುತ್ತಿರುವ ನಾಗರಕಟ್ಟೆ ಬೇರೆ ನಾಗರಕಟ್ಟೆ ಆಗಿರುತ್ತದೆ.. ತಕರಾರಿ ನಾಗರಕಟ್ಟೆ ಎರಡು ನಾಗರ ಇರುವ ಕಟ್ಟೆ ಎಂದರೆ ನಿಜ . ಈಗ ತೋರಿಸುತ್ತಿರುವ ನಿಪಿ–23 ಪೋಟೋದಲ್ಲಿ ಕಾಣುತ್ತಿರುವ ಜೋಡು ನಾಗರಕಟ್ಟೆ ದಾವಾ ನಾಗರ ಕಟ್ಟೆ ಆಗಿರುವುದಿಲ್ಲ , ಅದು ವಾದಿಯರಿಗೆ

ಸೇರಿರುತ್ತದೆ. ವಾದಿಯರ ಜೋಡು ನಾಗರಕಟ್ಟೆ ನಮ್ಮ ಬಾವಿಯಿಂದ ವಾದಿಯರ ಮನೆಯ ಹತ್ತಿರ ಇರುತ್ತದೆ..

(5) ನಮ್ಮ ಹಾಗೂ ಪ್ರತಿವಾದಿಯರ ಮನೆ 30 ಪುಟು ಅಂತರದಲ್ಲಿ ಇರುತ್ತದೆ. ನಮ್ಮ ಮನೆ ಮತ್ತು ವಾದಿಯರ ಮನೆ ಬೇರ್ಪಡಿಸಲು ನಮ್ಮ ಹಾಗೂ ವಾದಿಯರ ಪಾಗಾರ ಇರುತ್ತದೆ . ನಮ್ಮ ಹಾಗೂ ವಾದಿಯರ ಪಾಗಾರದ ಮಧ್ಯದಲ್ಲಿ 3 ಪುಟು ಅಗಲ ಇದ್ದು, ಅಲ್ಲಿ ರಸ್ತೆ ಇರುತ್ತದೆ. ಸದರಿ 3 ಪುಟು ರಸ್ತೆಯನ್ನು ಕಾಲು ದಾರಿಯಾಗಿ ಬಳಸುತ್ತಿದ್ದೇವೆ. ಸದರಿ ಕಾಲುದಾರಿಯನ್ನು ಹಿಂದಿನಿಂದ ನಮ್ಮ ಕೇರಿಯಲ್ಲಿರುವ ಜನರು ಬಳಕೆ ಮಾಡಿಕೊಂಡು ಬಂದಿರುತ್ತಾರೆ . ಸದರಿ ಕಾಲು ದಾರಿ ಮುಖಾಂತರ ಹೋಗಲು ನಾವು ದಣಪೆ ಇಟ್ಟುಕೊಂಡಿರುತ್ತೇವೆ. ಕಾಲು ದಾರಿಯಿಂದ ಕಾರವಾರ ಸೈಡಿಗೆ ಬಾವಿ ಬರುತ್ತದೆ. ನಮ್ಮ ಮನೆಯಿಂದ ಕಾಲು ದಾರಿಗೆ ಬರಬೇಕಾದರೆ ಬಾವಿ ಎಡಗಡೆ ಬರುತ್ತದೆ , ವಾದಿಯರ ಮನೆ ಬಲಗಡೆ ಬರುತ್ತದೆ.

(6) ತಕರಾರು ನಾಗರಕಟ್ಟೆ ಮತ್ತು ಬಾವಿಯ ನಡುವೆ ಜಾಗ ಇರುವುದಿಲ್ಲ . ಬಾವಿಯ ಕಟ್ಟೆಗೆ ತಾರೀಖು ಬರೆದಿರುವುದಿಲ್ಲ . ನಾಗರಕಟ್ಟೆಗೆ ನನ್ನ ತಂದೆ 1987 ರಲ್ಲಿ ಸ್ಥಾಪನೆ ಮಾಡಿದ ಬಗ್ಗೆ ತಾರೀಖು ಇರುತ್ತದೆ. ನಾಗರಕಟ್ಟೆಯ ಮೇಲೆ ದಿಃ 21-04-1987 ಎಂದು ಬರೆಯಲಾಗಿದೆ ಎಂದರೆ ನಾನು ನೋಡಿರುವುದಿಲ್ಲ . ನಾಗರ ಕಟ್ಟೆ , ಬಾವಿ ಮತ್ತು ನಮ್ಮ ಮನೆಯನ್ನು ನೋಡಿಕೊಂಡು ಬರಲು ನ್ಯಾಯಾಲಯದಿಂದ ಅಯುಕ್ತರನ್ನು ನೇಮಿಸಲು ನನ್ನದು ತಕರಾರು ಇರುವುದಿಲ್ಲ.

( ಮುಂದುವರೆದ ಪಾಟೀ ಸವಾಲಿಗೆ ಶ್ರೀ ಎಂ ಪಿ ಬಿ ವಕೀಲರು ಕಾಲವಕಾಶ ಕೋರಿದ್ದು , ಕಾಲವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ,
ಅಂಕೋಲಾ.